

ಅನಂತರ ಸ್ನಾನದ ಡಬರಿಯಿಂದ ಮೇಲೆದ್ದು, ತನ್ನ ಗನ್‌ಗೆ ಮುತ್ತಿಟ್ಟು 'ಗನ್ ಹೊಡೀಬೇಕು ಅನ್ನಿಸಿದ್ರೆ ತಕ್ಷಣ ಹೊಡೀಬೇಕು; ಹರಟೆ ಹೊಡೀಬಾರದು' (When you have to shoot, shoot; don't talk) ಎನ್ನುತ್ತಾನೆ. ಈ ಮಾತಂತೂ ಜಗತ್ತಿನ ಸಿನಿಮಾಪ್ರಿಯರಲ್ಲಿ ಗಾದೆನುಡಿಯಾಗಿ ಬಿಟ್ಟಿದೆ. ಇಂತಹ ಹಲವಾರು ಬೀಜದ ಮಾತುಗಳು (Punching Dialogues) ಈ ಸಿನಿಮಾದಲ್ಲಿ ಸೇರಿ ಹೋಗಿವೆ. ಸಿನಿಮಾದ ಹೆಸರಾದ The Good The Bad And The Ugly ಎನ್ನುವುದನ್ನೇ ಜನರು 'ವೆಂಕ, ನಾಣಿ, ಸೀನ' ಎನ್ನುವ ರೀತಿಯಲ್ಲಿ ಬಳಸುತ್ತಾರೆ.

ವಿಪರೀತ ನಾಜೂಕಿನ ರಮ್ಯ ಐತಿಹಾಸಿಕ ಸಿನಿಮಾಗಳು ಹಾಲಿವುಡ್ ಜಗತ್ತನ್ನು ಆಕ್ರಮಿಸಿಕೊಂಡಿದ್ದಾಗ, ಪೂರ್ತಿ ವಿರುದ್ಧ ಬಗೆಯ ಈ ಕೌಬಾಯ್ ಸಿನಿಮಾಗಳು ಜನರನ್ನು ಆಕರ್ಷಿಸಿದ್ದು ಆಶ್ಚರ್ಯವೇನೂ ಅಲ್ಲ. ಒಂದಿಷ್ಟೂ ನಾಗರಿಕತೆ ಇಲ್ಲದ, ಕರಾಳ ಗುಣಗಳ, ಹೊಲಸಾದ ಬಟ್ಟೆಗಳನ್ನು ತೊಟ್ಟ, ಆದರೆ ಆಕರ್ಷಕ ವ್ಯಕ್ತಿತ್ವ ಹೊಂದಿದ ಈ ಸ್ಟೈಲಿಶ್ ಸಿನಿಮಾಗಳು ಮತ್ತೊಂದು ಪ್ರಕಾರಕ್ಕೆ ನಾಂದಿ ಹಾಕಿಕೊಟ್ಟವು. ಕಣ್ಣು ಹಾಯಿಸಿದ ಕಡೆಯಲ್ಲೆಲ್ಲಾ ಬಯಲು ಭೂಮಿ, ಎಲ್ಲೋ ಒಂದಿಷ್ಟು ಪಾಳು ಬಿದ್ದ ಮನೆಗಳು, ಆಗೀಗ ಕೇಳಿ ಬರುವ ಫಿರಂಗಿ ಹಾರಿದ ಸದ್ದು, ಯಾವ ಸಂಕೋಚವೂ ಇಲ್ಲದೆ ಮಾಡುವ ಕೊಲೆಗಳು – ಒಟ್ಟಾರೆ ಬೇರೆಯೇ ಜಗತ್ತು ಈ ಸಿನಿಮಾದಲ್ಲಿ ಕಂಡು ಬರುತ್ತದೆ. ವಿಶೇಷವೆಂದರೆ ಆ ಕ್ಷಮೆಯಿಲ್ಲದೂರಿನ ಕಥನ ನಮ್ಮನ್ನು ಆಕರ್ಷಿಸುತ್ತದೆ!

ಈ ಬಗೆಯ ಸಿನಿಮಾಗಳನ್ನು 'ಸ್ಪಗ್ಯಾಟಿ ವೆಸ್ಟರ್ನ್ಸ್' ಎಂದು ಕರೆದಿದ್ದಕ್ಕೆ ಕಾರಣವಿದೆ. ಈ ಎಲ್ಲಾ ಹಾಲಿವುಡ್ ಸಿನಿಮಾಗಳು ತಯಾರಾಗಿದ್ದು ಇಟಲಿಯಲ್ಲಿ! (ಸ್ಪಗ್ಯಾಟಿ ಎನ್ನುವುದು ಇಟಾಲಿಯನ್ ದೇಶದ ಸುಪ್ರಸಿದ್ಧ ಖಾದ್ಯ) ಹತ್ತೊಂಬತ್ತನೇ ಶತಮಾನದ ಅಮೆರಿಕದ ಕತೆಯನ್ನು ಹೇಳುವ ಈ ಚಿತ್ರದ ನಿರ್ದೇಶಕನು ಈ ಸಿನಿಮಾ ಮಾಡಿದಾಗ ಅಮೆರಿಕವನ್ನೇ ನೋಡಿರಲಿಲ್ಲವಂತೆ. ಜೊತೆಗೆ ಇಂಗ್ಲಿಷ್ ಭಾಷೆಯ ಗಂಧಗಾಳಿಯೂ ಅವನಿಗೆ ಇರಲಿಲ್ಲವಂತೆ. ಕೇವಲ ಆಗ ಲಭ್ಯವಿದ್ದ ಮಾಧ್ಯಮಗಳಾದ ಸಿನಿಮಾ, ಪುಸ್ತಕ, ರೇಡಿಯೋ, ಟೀವಿ ಇತ್ಯಾದಿಗಳ ಮೂಲಕ ಅಮೆರಿಕವನ್ನು ಊಹಿಸಿಕೊಂಡು, ಅಲ್ಲಿಯ ಜನರಿಗಾಗಿ ಈ ಸಿನಿಮಾಗಳನ್ನು ತನ್ನ ತಾಯ್ನೆಲದಲ್ಲಿಯೇ ತಯಾರಿಸಿದ್ದ. ಇಟಲಿ ಮತ್ತು ಸ್ಪೇನ್ ದೇಶದಲ್ಲಿಯೇ ಈ ಚಿತ್ರದ ಚಿತ್ರೀಕರಣ ನಡೆದಿದೆ. ಕೇವಲ ಮೂವರು ನಾಯಕರನ್ನು ಹೊರತು ಪಡಿಸಿದರೆ, ಈ ಚಿತ್ರದಲ್ಲಿ ನಟಿಸಿದ ಯಾರಿಗೂ ಇಂಗ್ಲಿಷ್